**1 ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ**

**ಸಿ.ಸಿ. ನಂ.:1132/2023**

ಫಿರ್ಯಾಧಿದಾರರುಃ - ರಾಜ್ಯದ ಪರವಾಗಿ ಆರಕ್ಷಕ ನಿರೀಕ್ಷಕರು,
ಹೊಸಪೇಟೆ ಸಂಚಾರಿ ಪೊಲೀಸ್ ಠಾಣೆ.

ವಿರುದ್ಧ

ಆಪಾಧಿತರು :-

1. ದುರ್ಗೇಶ್ ತಂದೆ ಗೋವಿಂದಪ್ಪ,
ವಯಾಸ್ಸುಃ 28 ವರ್ಷ, ವಾಸಃ ಶೀಗನಹಳ್ಳಿ ಗ್ರಾಮ,
ತಾಃ ಹಗರಿಬೊಮ್ಮನಹಳ್ಳಿ, ಹಾಲಿ ವಾಸಃ ಹಿಟ್ನಾಳ್ ಗ್ರಾಮ,
ತಾಃ ಜಿಃ ಕೊಪ್ಪಳ. (ಮೃತಪಟ್ಟಿರುತ್ತಾರೆ).

2. ರಾಮರಾವ್ ಕೆ., ತಂದೆ ಸುಬ್ಬಾರಾವ್ ಕೆ.,
ವಯಸ್ಸುಃ 52 ವರ್ಷ, ವಾಸಃ ರಾಮದೇವರ ದೇವಸ್ಥಾನದ
ಹತ್ತಿರ, ಶಿವಪುರ ಗ್ರಾಮ, ತಾಃ ಜಿಃ ಕೊಪ್ಪಳ.

3. ಅಜಯ್‌ರಡ್ಡಿ, ತಂದೆ ವೆಂಕಟರೆಡ್ಡಿ,
ವಯಸ್ಸುಃ 32 ವರ್ಷ, ವಾಸಃ 17 ನೇ ವಾರ್ಡ್, ರಾಘವೇಂದ್ರ
ಕಾಲೂನಿ, 02 ನೇ ಸ್ಟೇಜ್, ದತ್ತ ಶಾಲೆಯ ಹತ್ತಿರ, ಬಳ್ಳಾರಿ,
ತಾಃ ಜಿಃ ಬಳ್ಳಾರಿ. (ದಿನಾಂಕ 27.12.2023 ರಂದು ತಪ್ಪು
ಒಪ್ಪಿಕೊಂಡಿರುತ್ತಾರೆ.)

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ದಾಖಲು ಮಾಡಿಕೊಳ್ಳಲಾದ ಆಪಾಧಿತರ ಹೇಳಿಕೆ

ಪ್ರಶ್ನೆ 1. ನೀವು ಅಭಿಯೋಜನೆ ಪರ ಸಾಕ್ಷಿಗಳ ವಿಚಾರಣೆಯನ್ನು ಆಲಿಸಿದ್ದೀರಾ?

ಉತ್ತರಃ ಆರೋಪಿ ಸಂಖ್ಯೆ 2 - ಹೌದು

ಪ್ರಶ್ನೆ 2. ಚಾಸಾ-1/ಫ್ರಾಸಾ-1 ಬಸವರಾಜ ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 15.08.2023 ರಂದು ಬೆಳ್ಳಿಗ್ಗೆ 11.30 ಗಂಟೆಗೆ ದುರ್ಗೇಶ ಮತ್ತು ಚಾಸಾ-2 ರವರು ಬೈಕ್‌ನಲ್ಲಿ ಗುಂಡಾ ಫಾರೆಸ್ಟ್ ಗೆ ಹೋಗಿ ಬರುತ್ತಿದ್ದಾಗ ಒಮ್ಮೇಲೆ ಒಂದು ಕಾರ್ ಬ್ರೇಕ್ ಹಾಕಿದ್ದರಿಂದ ದುರ್ಗೇಶ ಮತ್ತು ಚಾಸಾ-2 ರವರ ಬೈಕ್ ಸದರಿ ಕಾರ್ ಗೆ ಡಿಕ್ಕಿ ಹೊಡೆದು ಅಪಘಾತ ಆಗಿರುತ್ತದೆ ಎಂದು ದಾರಿಯಲ್ಲಿ ಹೋಗುತ್ತಿದ್ದ ಜನರು ಚಾಸಾ-13 ರವರಿಗೆ ತಿಳಿಸಿದ್ದು, ಚಾಸಾ-13 ರವರು ಅವರಿಗೆ ತಿಳಿಸಿದ ನಂತರ ಅವರು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ, ಅಲ್ಲಿ ದುರ್ಗೇಶ ಮತ್ತು ಚಾಸಾ-2 ರವರು ಗಾಯಗೊಂಡಿದ್ದು, ದುರ್ಗೇಶನ (1 ನೇ ಆರೋಪಿ)

ಎಡಗಾಲಿನ ಮೂಳೆ ಮುರಿದಿದ್ದು, ಮತ್ತು ಅತನ ಮರ್ಮಾಂಗಕ್ಕೆ ಪೆಟ್ಟು ಬಿದ್ದಿದ್ದು, ಚಾಸಾ-2 ರವರ ಕೈಗೆ ಮತ್ತು ಮುಖಕ್ಕೆ ಪೆಟ್ಟು ಬಿದ್ದಿದ್ದ, ನಂತರ ಗಾಯಾಳುಗಳನ್ನು ಚಾಸಾ-13 ಮತ್ತು 14 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಕಳುಹಿಸಿದ್ದು, ದಿನಾಂಕ 16.08.2023 ರಂದು ರಾತ್ರಿ 9.30 ಗಂಟೆಗೆ ದುರ್ಗೇಶ (1 ನೇ ಆರೋಪಿ) ಮರಣ ಹೊಂದಿದ್ದು, ನಂತರ ಅವರು ದೂರು ದಾಖಲು ಮಾಡಿದ ನಂತರ ಅಪಘಾತ ಸ್ಥಳಕ್ಕೆ ಪೋಲಿಸರು ಕರೆದುಕೊಂಡು ಹೋಗಿ, ದಿನಾಂಕ 18.08.2023 ರಂದು ವಿಚಾರಣೆ ಮಾಡಿ, ಅಲ್ಲಿ ಅವರ ಸಹಿ ಪಡೆದಾಗ ಸ್ಥಳದಲ್ಲಿ ಚಾಸಾ-13 ಮತ್ತು ಅವರ ಸ್ನೇಹಿತರಿದ್ದು, ಘಟನಾ ಸ್ಥಳದಲ್ಲಿ ಫೋಟೊ ತೆಗೆದ ನಂತರ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಚಾಸಾ-2 ರವರು ಹೋಗುತ್ತಿದ್ದ ಬೈಕ್ ಇದ್ದು, ಅಲ್ಲಿ ಅವರು ಸಹಿ ಮಾಡಿದ್ದು, ಅಲ್ಲಿ ವಾಹನಗಳನ್ನು ಜಪ್ತು ಮಾಡಿದ ನಂತರ ಕಾರ್ ಚಾಲಕನು ಏಕಾಏಕಿ ಬ್ರೆಕ್ ಹಾಕಿದ್ದರಿಂದ ಹಿಂದಿನಿಂದ ದುರ್ಗೇಶ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಕಾರಿಗೆ ಡಿಕ್ಕಿ ಆಗಿದ್ದು, ಆ ಎರಡು ವಾಹನಗಳ ನಡುವೆ ಅಂತರ ಇರಲಿಲ್ಲ ಎಂದು ಗೊತ್ತಾದ ನಂತರ ಪೊಲೀಸರು ಕರೆದು ಕಾರ್ ಚಾಲಕನ ಹೆಸರು ರಾಮದೇವ (2 ನೇ ಆರೋಪಿ) ಎಂದು ತಿಳಿಸಿ, ಅಪಘಾತವು ಕಾರ್ ಚಾಲಕ ಹಾಗೂ ದುರ್ಗೇಶ ಇಬ್ಬರ ತಪ್ಪಿನಿಂದ ಆಗಿರುತ್ತದೆ ಎಂದು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 3. ಚಾಸಾ-2/ಪ್ರಾಸಾ-3 ದೇವರಾಜ ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 15.08.2023 ರಂದು ಬೆಳ್ಳಿಗ್ಗೆ 11.30 ಗಂಟೆಗೆ ಅವರ ಸ್ನೇಹಿತ ದುರ್ಗೇಶ (1 ನೇ ಆರೋಪಿ) ಮತ್ತು ಅವರು ಹೊಪಸೇಟೆಗೆ ಬಂದು ಅಂಡರ್ ಗ್ರೌಂಡ್‌ನಿಂದ ವಾಪಸ್ಸು ಊರಿಗೆ ಹೋಗುತ್ತಿದ್ದು, ಅವರ ವಾಹನ ಆರ್.ಎಕ್ಸ್.-100 ನ್ನು ದುರ್ಗೇಶ ಚಲಾಯಿಸುತ್ತಿದ್ದು, ಅವರು ದ್ವಿಚಕ್ರ ವಾಹನದ ಹಿಂದಿನ ಸೀಟ್‌ನಲ್ಲಿ ಕುಳಿತುಕೊಂಡಿದ್ದು, ಅವರು ಹೋಗುವ ದಾರಿಯಲ್ಲಿ ಶನಿಶ್ವೇರ ದೇವಸ್ಥಾನದ ಮುಂದೆ ಅವರನ್ನು ಓವರ್ ಟೇಕ್ ಮಾಡಿಕೊಂಡು ಒಂದು ಇನೋವಾ ಕಾರ ಅವರ ಮುಂದೆ ಬಂದಿದ್ದು, ಸದರಿ ಕಾರ ಚಾಲಕನು ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಅವರ ದ್ವಿಚಕ್ರ ವಾಹನ ಇನೋವಾ ಕಾರಿಗೆ ಡಿಕ್ಕಿಯಾಗಿ, ಅವರು ಕಾರಿಗೆ ಗುದ್ದಿ ಬಿದ್ದಿದ್ದು, ಅವರ ಕುತ್ತಿಗೆ ಮತ್ತು ಮೊಣಕಾಲಿಗೆ ಪೆಟ್ಟಾಗಿತ್ತು, ದುರ್ಗೇಶನ ತಲೆಗೆ ಪೆಟ್ಟು ಬಿದ್ದು ಕಾಲು ಮುರಿದು, ಆತನ ಮರ್ಮಾಂಗಕ್ಕೆ ಪೆಟ್ಟಾಗಿ, ಅಪಘಾತದ ನಂತರ ದುರ್ಗೇಶ ಅವರ ಅಣ್ಣನಾದ ಚಾಸಾ-13 ರವರಿಗೆ ಫೋನ್ ಮಾಡಿದಾಗ, ಚಾಸಾ-13 ರವರು ಬಂದ ನಂತರ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದ ನಂತರ

ಅವರನ್ನು ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಗೆ ಕರೆದುಕೊಂಡು ಹೋಗಿದ್ದು, ಅವರಿಗೆ ಚಿಕಿತ್ಸೆ ನೀಡಿ ವಾಪಸ್ಸು ಕಳುಹಿಸಿದ್ದು, ದುರ್ಗೇಶರವರು ಆಸ್ಪತ್ರೆಯಲ್ಲಿ ಮರಣ ಹೊಂದಿದ್ದು, ಅಪಘಾತವು ಕಾರ ಚಾಲಕನ ತಪ್ಪಿನಿಂದ ಆಗಿದ್ದು, ಕಾರ ಚಾಲಕನ ಹೆಸರು ರಾಜರಾವ್ (3 ನೇ ಆರೋಪಿ) ಎಂದು ಗೊತ್ತಾಗಿ, ಅಪಘಾತವಾದ ನಂತರ ಹಲವಾರು ಜನರು ಸೇರಿದಾಗ ಅವರು ಆರೋಪಿತರನ್ನು ನೋಡಿದ್ದು, ಆದರೆ ಅವರಿಗೆ ಪೆಟ್ಟಾಗಿದ್ದರಿಂದ ಅವರನ್ನು ಸರಿಯಾಗಿ ಗೊತ್ತಾಗಿರಲಿಲ್ಲ, ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 4. ಚಾಸಾ-3 ಪ್ರಾಸಾ-3 ಶಿವಕುಮಾರ್ ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 15.08.2023 ರಂದು ಗ್ಯಾರೇಜ್ ಕೆಲಸ ಮುಗಿಸಿಕೊಂಡು ಬೈಕಿನಲ್ಲಿ ಮನೆಗೆ ಹೋಗುತ್ತಿರುವಾಗ ಸುಮಾರು ಬೆಳಗ್ಗೆ 11.00 ಗಂಟೆಗೆ ಅವರ ಮುಂದೆ ಒಂದು ಕಾರ್ ಓವರ್ ಟೇಕ್ ಮಾಡಿಕೊಂಡು ಹಾಗೂ ಅದರ ಹಿಂದೆ ಒಂದು ಆರ್.ಎಕ್ಸ್. ಬೈಕ್ ಸಹ ವೇಗವಾಗಿ ಹೋಗಿದ್ದು, ನಂತರ ಕಾರ್ ಚಾಲಕ ಒಮ್ಮೆಲೆ ಬ್ರೇಕ್ ಹಾಕಿದನ್ನು ನೋಡಿ ಬೈಕ್ ಚಾಲಕ ಸಹ ಬ್ರೇಕ್ ಹಾಕಿದ್ದು, ಆದರೆ ಬೈಕ್ ನಿಯಂತ್ರಣಕ್ಕೆ ಬಾರದೇ ಬೈಕ್ ಕಾರಿಗೆ ಡಿಕ್ಕಿ ಪಡಿಸಿದಾಗ ಬೈಕ್ ಚಾಲಕನಿಗೆ ಸ್ವಲ್ಪ ಪೆಟ್ಟುಗಳಾಗಿದ್ದು, ತಲೆಯಿಂದ ರಕ್ತ ಸೋರುತ್ತಿತ್ತು ಮತ್ತು ಕಾಲಿಗೆ ಗಾಯವಾಗಿತ್ತು, ಆಗ ಕಾರ್ ಚಾಲಕ ಕಾರನ್ನು ನಿಲ್ಲಿಸದೇ ಹಾಗೆಯೇ ಹೋಗಿದ್ದು, ಅವರು ಆ್ಯಂಬುಲೇನ್ಸ್ ಗೆ ಕರೆ ಮಾಡಿ, ಸೇರಿದ ಜನ ಬೈಕ್ ಚಾಲಕನ ಮನೆಗೆ ಕರೆ ಮಾಡಿದ ನಂತರ ಅವರು ಬೈಕ್ ಚಾಲಕನನ್ನು ಆ್ಯಂಬುಲೇನ್ಸ್ ನಲ್ಲಿ ಹತ್ತಿಸಿ ಮನೆಗೆ ಹೋಗಿದ್ದು, ಕಾರ ಸ್ವಲ್ಪ ಬಿಳಿ ಬಣ್ಣದಾಗಿದ್ದು, ಇನೋವಾ ಕಂಪನಿಯದು ಇರಬಹುದು, ಬೈಕ್ ಚಾಲಕನನ್ನು ನೋಡಿದ್ದು, ಸದರಿ ಅಪಘಾತ ಕಾರ್ ಚಾಲಕರು ಒಮಿಂದೊಮ್ಮೆಲೆ ಬ್ರೇಕ್ ಹಾಕಿದ್ದರಿಂದ ಆಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಅವರನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 5. ಚಾಸಾ-3 ಪ್ರಾಸಾ-3 ಶಿವಕುಮಾರ್ ರವರು ಎ.ಪಿ.ಪಿ. ರವರು ಮಾಡಿದ ಪಾಟೀ ಸವಾಲಿನಲ್ಲಿ, ಕಾರ್ ಚಾಲಕ ಅತೀವೇಗ ಮತ್ತು ಅಜಾಗರೂಕತೆಯಿಂದ ಕಾರ್ ಚಲಾಯಿಸುತ್ತಿದ್ದ ಎಂಬುದನ್ನು ಒಪ್ಪಿ,

ಓವರ್ ಹೆಡ್ ವಾಟರ್ ಟ್ಯಾಂಕ್ ಹತ್ತಿರ ಒಂದು ನಾಯಿ ಅಡ್ಡ ಬಂದ ಕಾರಣ ಕಾರ್ ಚಾಲಕರು ಏಕಾಏಕಿ ನಿರ್ಲಕ್ಷ್ಯತೆಯಿಂದ ಬ್ರೇಕ್ ಹಾಕಿದ ಎಂಬುದನ್ನು ಒಪ್ಪಿ, ನಿರ್ಲಕ್ಷ್ಯತೆಯಿಂದ ಬ್ರೇಕ್ ಹಾಕಿದ್ದರಿಂದಲೇ ಬೈಕ್ ಚಾಲಕ ವೇಗವಾಗಿ ಹೋಗಿ ಡಿಕ್ಕಿ ಪಡಿಸಿದ ಎಂಬುದನ್ನು ಒಪ್ಪಿ, ಬೈಕ್ ಚಾಲಕರ ಹಿಂದೆ ಕುಳಿತಿದ್ದ ಚಾಸಾ-2 ರವರಿಗೂ ಗಾಯಗಳಾದವು ಎಂಬ ಸೂಚನೆಯನ್ನು ಒಪ್ಪಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 6. ಚಾಸಾ-9/ಫ್ರಾಸಾ-4 ತಿಪ್ಪೆಸ್ವಾಮಿರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 18.08.2023 ರಂದು ಟಿ.ಬಿ. ಡ್ಯಾಂ ರಸ್ತೆಯಲ್ಲಿರುವ ಶನಿಮಹಾತ್ಮ ದೇವಸ್ಥಾನದ ಹತ್ತಿರ ಪೊಲೀಸರು ಹೇಳಿದಂತೆ ಚಾಸಾ-13 ರವರು ಅವರನ್ನು ಕರೆಯಿಸಿ, ಸ್ಥಳದಲ್ಲಿ ಅಪಘಾತ ಆಗಿದೆ ಎಂದು ಪೊಲೀಸರು ತಿಳಿಸಿದಾಗ, ಆ ಸ್ಥಳದಲ್ಲಿ ಬೈಕ್ ಹಾಗೂ ಒಂದು ಕಾರ್ ಇತ್ತು, ಸದರಿ ಸ್ಥಳದಲ್ಲಿ ಪಂಚನಾಮೆ ಬರೆಯಲಾಯಿತು ಅದಕ್ಕೆ ಅವರು ಸಾಕ್ಷಿಯಾಗಿ ಸಹಿ ಮಾಡಿದ್ದು, ಪೊಲೀಸ್ ಠಾಣೆಯಲ್ಲಿ ಒಂದು ಬೈಕ್‌ನ್ನು ತೋರಿಸಿದಾಗ ಪೊಲೀಸರಿಗೆ ಸದರಿ ಬೈಕ್‌ನ್ನು ಸ್ಥಳದಲ್ಲಿ ನೋಡಿದ್ದೆವು ಎಂದು ಅವರು ಹೇಳಿದ್ದು, ಅದರಂತೆ ಸದರಿ ಬೈಕ್‌ನ್ನು ಪೊಲೀಸ್ ಠಾಣೆಯಲ್ಲಿ ಜಪ್ತು ಪಡೆಸಿಕೊಂಡು, ಸದರಿ ಜಪ್ತು ಪಂಚನಾಮೆಯಲ್ಲಿ ಅವರು ಸಾಕ್ಷಿಯಾಗಿ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 7. ಚಾಸಾ-9/ಫ್ರಾಸಾ-4 ತಿಪ್ಪೆಸ್ವಾಮಿರವರು ಎ.ಪಿ.ಪಿ. ರವರು ಮಾಡಿದ ಪಾಟೀ ಸವಾಲಿನಲ್ಲಿ, ದಿನಾಂಕ 18.08.2023 ರಂದು ಆರ್.ಟಿ.ಓ. ಚೆಕ್ ಪೋಸ್ಟ್ ಬಳಿ ಇರುವ ಓವರ್ ಹೆಡ್ ಟ್ಯಾಂಕ್ ಬಳಿ ಒಂದು ಅಪಘಾತವಾಗಿದ್ದು, ಚಾಸಾ-13 ರವರು ಒಂದು ಇನೋವಾ ಕಾರ್ ಮೋಟಾರ್ ಸೈಕಲ್‌ಗೆ ಅಪಘಾತ ಪಡೆಸಿದ ಜಾಗ ಇದೇ ಎಂದು ತೋರಿಸಿದ್ದು, ಅದರಂತೆ ಪೊಲೀಸರು ಸ್ಥಳ ಪಂಚಾನಾಮೆಯನ್ನು ಸಂಜೆ 04.00 ರಿಂದ 05.00 ರವರೆಗೆ ಹಾಗೂ ಜಪ್ತು ಪಂಚನಾಮೆಯನ್ನು ಸಂಜೆ 05.30 ರಿಂದ 06.30 ರವರೆಗೆ ಜರುಗಿಸಲಾಯಿತು ಎಂಬುದನ್ನು ಒಪ್ಪಿರುತ್ತಾರೆ. ಮುಂದುವರೆದು ಚಾಸಾ-13 ರವರು ಮೋಟಾರ ಸೈಕಲ್ ನ್ನು ತೋರಿಸಿದ್ದು, ಅದರಂತೆ ಜಪ್ತು ಪಂಚನಾಮೆಯನ್ನು ಜರುಗಿಸಿ ವಾಹನವನ್ನು ಜಪ್ತು ಪಡೆಸಿಕೊಳ್ಳಲಾಯಿತು ಎಂಬ ಸೂಚನೆಯನ್ನು ಒಪ್ಪಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 8. ಚಾಸಾ-10/ಪ್ರಾಸಾ-5 ನಾಗರಾಜರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 18.08.2023 ರಂದು ಆರ್.ಟಿ.ಓ. ಬಳಿ, ಓವರ್ ಹೆಡ್ ಟ್ಯಾಂಕ್ ಬಳಿ ಬರಲು ಅವರಿಗೆ ಚಾಸಾ-13 ರವರು ತಿಳಿಸಿ, ಅಲ್ಲಿ ಅವರು ಹೋದಾಗ ಪೊಲೀಸ್ ಸಿಬ್ಬಂದಿ, ಚಾಸಾ-13, ಚಾಸಾ-1 ರವರು ಇದ್ದು, ಅಲ್ಲಿ ಚಾಸಾ-1 ರವರು ಅಪಘಾತ ಸ್ಥಳವನ್ನು ತೋರಿಸಿ ಅಲ್ಲಿ ಕಾರ್ ಬೈಕ್‌ಗೆ ಗುದ್ದಿರುತ್ತದೆ ಎಂದು ತಿಳಿಸಿದ್ದು, ಈ ಕುರಿತು ಸಂಜೆ 4.00 ರಿಂದ 5.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದ ಅವರು ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಬೈಕ್‌ನ್ನು ಚಾಸಾ-13 ರವರು ಪೊಲೀಸರಿಗೆ ತೋರಿಸಿದ್ದು, ಅದರಂತೆ ಜಪ್ತು ಪಂಚನಾಮೆಯನ್ನು ಜರುಗಿಸಿದ್ದು, ಸಾಕ್ಷಿಯು ಮುಂದುವರೆದು ಪೊಲೀಸರು ಇದೇನಾ ಬೈಕ್ ಎಂದು ಕೇಳಿದಕ್ಕೆ ಅವರು ಹೌದು ಎಂದು ನುಡಿದಿದ್ದು, ಸದರಿ ಪಂಚನಾಮೆಯನ್ನು ಸಂಜೆ 5.30 ರಿಂದ 6.30 ರವರೆಗೆ ಜರುಗಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 9. ಚಾಸಾ-12 ಪ್ರಾಸಾ-6 ಕರಿಯಪ್ಪರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ಸುಮಾರು ಒಂದು ವರ್ಷದ ಹಿಂದೆ ಅವರು ಹೊಸಪೇಟೆಗೆ ಬೇರೆ ಕೆಲಸಕ್ಕೆ ಎಂದು ಬಂದಾಗ 2 ನೇ ಆರೋಪಿಯಾದ ನೀವು ಅವರಿಗೆ ಕರೆ ಮಾಡಿ ಸಂಚಾರಿ ಪೊಲೀಸ್ ಠಾಣೆಗೆ ಬರಲು ತಿಳಿಸಿದಾಗ, ಅವರು ನೇರವಾಗಿ ಠಾಣೆಗೆ ಹೋಗಿದ್ದು, ಅವರ ಜೊತೆ ಚಾಸಾ-11 ರವರು ಇದ್ದು, ಸ್ಥಳದಲ್ಲಿ ಇಬ್ಬರು ಪೊಲೀಸ್‌ರು ಹಾಗೂ 2 ನೇ ಆರೋಪಿಯಾದ ನೀವು ಸಹ ಇದ್ದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 10. ಚಾಸಾ-11/ಪ್ರಾಸಾ-7 ಪ್ರಕಾಶರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ಯಾವುದೇ ಕಾರಣಕ್ಕೆ ಅವರು ಪೊಲೀಸ್ ಠಾಣೆಯ ಹತ್ತಿರ ಸುಮಾರು 2 ವರ್ಷಗಳ ಹಿಂದೆ ಆಗಸ್ಟ್ 15 ನೇ ತಾರೀಖಿನಂದು ಹೋಗಿದ್ದಾಗ, ಪಂಚನಾಮೆಯ ಸಲುವಾಗಿ ಸಹಿ ಮಾಡಲು ಪೊಲೀಸರು ಹೇಳಿ ಭಾವಚಿತ್ರಗಳನ್ನು ತೆಗೆಸಿ, ಅಪಘಾತಕ್ಕೆ ಸಂಬಂದಪಟ್ಟಂತೆ ಪಂಚನಾಮೆಗೆ ಸಾಕ್ಷಿಯನ್ನಾಗಿ ನಿನ್ನ ಸಹಿ ಪಡೆಯುತ್ತೇವೆ ಎಂದು ಪೊಲೀಸರು ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 11. ಚಾಸಾ-11/ಪ್ರಾಸಾ-7 ಪ್ರಕಾಶರವರು ಎ.ಪಿ.ಪಿ. ರವರು ಮಾಡಿದ ಪಾಟೀ ಸವಾಲಿನಲ್ಲಿ, ಅವರು ಪರಿಶೀಲಿಸಿ ನೋಡಿದಾಗ ಸದರಿ ಕಾರ್ ನೊಂದಣಿ ಸಂಖ್ಯೆ ಕೆಎ-37/ಎನ್-7789 ಆಗಿರುತ್ತದೆ ಎಂಬ ಸೂಚನೆಯನ್ನು ಒಪ್ಪಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 12. ಚಾಸಾ-13/ಪ್ರಾಸಾ-8 ಮಾರುತಿ ಉಪ್ಪಾರ ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ಮೃತ ದುರ್ಗೇಶ ಅವರ ತಮ್ಮ, ಚಾಸಾ-2 ಅವರ ಮೃತ ತಮ್ಮನ ಸ್ನೇಹಿತ, ದಿನಾಂಕ 15.08.2023 ರಂದು ಗುಂಡಾ ಫಾರೆಸ್ಟ್ ಹತ್ತಿರ ಟಿ.ಬಿ. ಡ್ಯಾಂ ನೋಡಿಕೊಂಡು ವಾಪಸ್ಸು ಶನಿಮಹತ್ಮಾ ದೇವಸ್ಥಾನದ ಹತ್ತಿರ ವಾಟರ್ ಟ್ಯಾಕ್ ಬಳಿ ಚಾಸಾ-2 ಹಾಗೂ ಮೃತ ದುರ್ಗೇಶ ರವರು ಮೋಟಾರ್ ಸೈಕಲ್‌ನಲ್ಲಿ ಬರುತ್ತಿರುವಾಗ ರಸ್ತೆಯ ಎಡಭಾಗದಿಂದ ಒಂದು ಇನೋವಾ ಕಂಪನಿಯ ಕಾರ್ ವೇಗವಾಗಿ ಬಂದು ಅವರ ತಮ್ಮನ ಮೋಟಾರ್ ಸೈಕಲನ್ನು ಓವರ್ ಟೇಕ್ ಮಾಡಿ ಮುಂದೆ ಏಕಾಏಕೀ ಬ್ರೇಕ್ ಹಾಕಿ ನಿಂತಿದ್ದು, ಹೀಗಾಗಿ ನಿಯಂತ್ರಣ ಸಿಗದೆ ಅವರ ತಮ್ಮ ಇದ್ದ ಮೋಟಾರ್ ಸೈಕಲ್ ಸದರಿ ಇನೋವಾ ಕಾರ್‌ಗೆ ಡಿಕ್ಕಿ ಹೊಡೆದಿದ್ದು, ಸದರಿ ಮೋಟಾರ್ ಸೈಕಲನ್ನು ಅವರ ತಮ್ಮ ಮೃತ ದುರ್ಗೇಶ ಚಾಲನೆ ಮಾಡುತ್ತಿದ್ದು, ಈ ಬಗ್ಗೆ ವಿಷಯವನ್ನು ಅವರ ಮೃತ ತಮ್ಮ ಹಾಗೂ ಚಾಸಾ-2 ರವರು ತಿಳಿಸಿದ್ದು, ಹೀಗೆ ಅಪಘಾತ ಆದ ನಂತರ ಕಾರಿನಲ್ಲಿದ್ದ ವ್ಯಕ್ತಿ ಅವರ ತಮ್ಮನಿಗೆ ಬೈಯಲು ಬಂದಿದ್ದಾಗ, ಸುತ್ತ ಮುತ್ತಲಿನ ಜನರು ಕಾರ್ ನಲ್ಲಿ ಇದ್ದ ವ್ಯಕ್ತಿಗಳಿಗೆ ನಿಮ್ಮ ತಪ್ಪಿನಿಂದ ಹೀಗೆ ಆಗಿರುತ್ತದೆ ಎಂದು ಹೇಳಿದ್ದಕ್ಕೆ ಕಾರ್ ಸಮೇತ ಆ ವ್ಯಕ್ತಿ ಸ್ಥಳದಿಂದ ಹೋಗಿದ್ದು, ಚಾಸಾ-2 ರವರು ಮೂರ್ಚೆ ತಪ್ಪಿದ್ದು, ಅವರು ಸ್ಥಳಕ್ಕೆ ಹೋಗಿ ಅವರನ್ನು ಎಚ್ಚರಿಸಿ, ಅವರ ತಮ್ಮ ಎಚ್ಚರವಾಗದೇ ಇದ್ದ, ಅವರ ತಮ್ಮನ ತಲೆಯ ಹಿಂಭಾಗ, ಎಡ ಭುಜದ ಹತ್ತಿರ ರಕ್ತಗಾಯವಾಗಿ, ಎದೆಯ ಮೇಲೆ ಎಲ್ಲಾ ಗಾಜಿನ ಚೂರುಗಳು ಇದ್ದು, ಅವನ ಎಡ ತೊಡೆಯ ಮೂಳೆ ಮುರಿದು ಆಚೆ ಬಂದಿತ್ತು, ಅಪಘಾತ ಆಗುವಾಗ ಸ್ಥಳದಲ್ಲಿ ಇದ್ದ ಸಾರ್ವಜನಿಕರು ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ ನಂತರ ಅವರು ಮತ್ತು ಚಾಸಾ-14 ರವರು ಸ್ಥಳಕ್ಕೆ ಹೋಗಿ ಅಲ್ಲಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಪ್ರಾಥಮಿಕ ಚಿಕಿತ್ಸೆ ಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆ ಕಳುಹಿಸಿದಾಗ ಹುಬ್ಬಳ್ಳಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಅವರ ತಮ್ಮ ಮೂರ್ಚೆ ಹೋಗಿ, ಮರುದಿನ ಅವರ ತಮ್ಮನನ್ನು ಪರೀಕ್ಷೆಗೆ ಒಳಪಡಿಸಿ ಅವನ ಮೆದುಳು ಕೆಲಸ ಮಾಡುತ್ತಿಲ್ಲ ಎಂದು ವೈದ್ಯರು ತಿಳಿಸಿ ಅವನು ಉಳಿಯುವುದಿಲ್ಲ ಎಂದು ಹೇಳಿದರು, ಅಲ್ಲಿಯವರೆಗೂ ಅವರು ಇನ್ನೂ ದೂರು ದಾಖಲಿಸದೆ ಇದ್ದ ಕಾರಣ ಅವರ ಮಾವ ಚಾಸಾ-1 ರವರಿಗೆ ದೂರು ಕೊಡಲು ತಿಳಿಸಿದ್ದು, ಅಪಘಾತ

ಪಡಿಸಿದ ಕಾರ್ ಬಿಳಿ ಬಣ್ಣದ ಇನೋವಾ ಕಾರ್ ನೊಂದಣಿ ಸಂಖ್ಯೆ ಕೆಎ-37/ಎನ್-7789 ಆಗಿದ್ದು ಅದರ ಮಾಲೀಕರು ಕೆ.ರಾಮಾರಾವ್ ಎಂದು ಅವರಿಗೆ ಪೊಲೀಸ್‌ರ ಮುಖಾಂತರ ತಿಳಿದಿದ್ದು, ಅಪಘಾತ ಆದಾಗ ಸ್ಥಳದಲ್ಲಿ ಇದ್ದ ಸಾರ್ವಜನಿಕರಲ್ಲಿ ಒಬ್ಬರು ಅವರ ತಮ್ಮನ ಮೊಬೈಲ್‌ನಿಂದ ಕಾರ್‌ನ ಭಾವಚಿತ್ರವನ್ನು ತೆಗೆದಿದ್ದು, ಅವರು ಸ್ಥಳಕ್ಕೆ ಹೋದಾಗ ಅವರಿಗೆ ತೋರಿಸಿದ್ದರಿಂದ ಅವರಿಗೆ ಸದರಿ ಕಾರ್ ನ ಬಗ್ಗೆ ಮಾಹಿತಿ ಇದ್ದು, ದಿನಾಂಕ 18.08.2023 ರಂದು ಪೊಲೀಸ್‌ರು ಮತ್ತೊಮ್ಮೆ ಅವರಿಗೆ ಕರೆ ಮಾಡಿ ಅಪಘಾತದ ಸ್ಥಳವನ್ನು ತೋರಿಸಲು ಹೇಳಿದ್ದು, ಅವರು ಸ್ಥಳಕ್ಕೆ ಹೋದಾಗ, ಅಲ್ಲಿ ಅವರ ಜೊತೆ ಚಾಸಾ-1, 9 ಮತ್ತು 10 ರವರು ಇದ್ದು, ಆ ಸಮಯ ಸಂಜೆಯಾಗಿತ್ತು, ಅವರು ಅಪಘಾತವಾದ ಸ್ಥಳವನ್ನು ತೋರಿಸಿದ್ದು, ಪೊಲೀಸ್‌ರು ಸ್ಥಳದಲ್ಲಿ ಭಾವಚಿತ್ರ ತೆಗೆದು ಹಾಗೂ ಒಂದು ದಾಖಲೆಯನ್ನು ತಯಾರಿಸಿ ಅವರ ಸಹಿಯನ್ನು ಪಡೆದ ನಂತರ ಠಾಣೆಯ ಹತ್ತಿರ ಬರಲು ಅವರಿಗೆ ತಿಳಿಸಿದ್ದು, ಅವರು ಠಾಣೆಗೆ ಹೋದಾಗ ಪೊಲೀಸ್‌ರು ಅಲ್ಲಿ ಯಮಹಾ ಆರ್.ಎಕ್ಸ್. ಮೋಟಾರ್ ಸೈಕಲ್‌ನ್ನು ತೋರಿಸಿದ್ದನ್ನು ಗುರುತಿಸಿದ್ದು, ಅಲ್ಲಿ ಪೊಲೀಸ್‌ರು ಭಾವಚಿತ್ರವನ್ನು ತೆಗೆದು ಅವರ ಸಹಿ ಪಡೆದುಕೊಂಡಿದ್ದು, ಸಾಕ್ಷಿಯು ಮುಂದುವರೆದು ಠಾಣೆಯಲ್ಲಿಯೇ ಅಪಘಾತ ಪಡಿಸಿದ ಕಾರ್ ಚಾಲಕನ ಭಾವಚಿತ್ರವನ್ನು ಠಾಣೆಯಲ್ಲಿ ಇದ್ದ ಯಾವುದೇ ವ್ಯಕ್ತಿಗೆ ತೋರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 13. ಚಾಸಾ-20/ಪ್ರಾಸಾ-9 ಮಂಜುನಾಥ ಪ್ರಸಾದರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 18.08.2023 ರಂದು ಹೊಸಪೇಟೆ ಸಂಚಾರಿ ಪೋಲಿಸ್ ಠಾಣೆಯ ಪಿ.ಎಸ್.ಐ.ರವರ ಕೋರಿಕೆಯ ಮೇರೆಗೆ, ಅದೇ ದಿನ ಮಧ್ಯಾಹ್ನ ಟಯೋಟಾ ಇನೋವಾ ನೊಂದಣಿ ಸಂಖ್ಯೆ ಕೆಎ-37/ಎನ್-7789 ನ್ನು ಪರಿಶೀಲನೆ ಮಾಡಿದಾಗ 1) ಹಿಂದಿನ ಬಂಪರ್, 2) ಹಿಂದಿನ ಬಲಭಾಗದ ಟೇಲ್ ಲ್ಯಾಂಪ್, 3) ಹಿಂದಿನ ಡಿಕ್ಕಿಯ ಡೋರ್ ಗ್ಲಾಸ್ ಹೊಡೆದು ಹೋಗಿದ್ದು, 4) ಡಿಕ್ಕಿ ಡೋರ್ ಜಖಂಗೊಂಡು ಜಜ್ಜಿದ್ದು ಹಾಗೂ 5) ಹಿಂದಿನ ಬಲಭಾಗದ ಸಸ್ಪೆಂಷನ್ ಶ್ಯಾಕಲ್ ಜಖಂಗೊಂಡಿದ್ದು, ಸದರಿ ವಾಹನವನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದ್ದು, ಸದರಿ ವಾಹನದ ಬ್ರೇಕ್ ಸುಸ್ಥಿತಿಯಲ್ಲಿ ಇದ್ದ ಬಗ್ಗೆ ಅವರು ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 14. ಚಾಸಾ-21/ಪ್ರಾಸಾ-10 ಮೊಹಮ್ಮದ್ ಶರೀಫ್ ಶೇಖ್ ಜಿ. ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 29.08.2023 ರಂದು ಸದರಿ ಪ್ರಕರಣದ ವಾಹನಗಳನ್ನು ತಪಾಸಣೆ ಮಾಡಲು ಮನವಿ ಪತ್ರ ಬಂದಿದ್ದು, ಅದರಂತೆ ಅದೇ ದಿನ ಸಂಚಾರಿ ಪೊಲೀಸ್ ಠಾಣೆಯ ಆವರಣದಲ್ಲಿ ಮೋಟಾರ್ ಸೈಕಲ್‌ನ್ನು ತಪಾಸಣೆ ಮಾಡಿದ್ದು, ಸದರಿ ವಾಹನವು ಗೇರ್ ವಾಹನ ಆಗಿದ್ದು, ವಾಹನದ ಫ್ರಂಟ್ ವೀಲ್ ಮಡ್ ಗಾಡ್, ಹೆಡ್ ಲೈಟ್, 2 ಇಂಡಿಕೇಟರ್ ಗಳು, ನಂಬರ್ ಪ್ಲೇಟ್, ಫ್ರಂಟ್ ಪೋರ್ಕ್, ಹೆಡ್ ಲೈಟ್, ಇನ್ ಟ್ರೂಮೆಂಟಲ್ ಕ್ಲಸ್ಟರ್, 2 ಕನ್ನಡಿಗಳು ಹಾಗೂ ಶಾಕ್ ಅಬ್ಸರ್ ವರ್ ಸಹ ಜಖಂಗೊಂಡಿದ್ದು, ಸದರಿ ವಾಹನದ ಫ್ಯೂಯಲ್ ಟ್ಯಾಂಕ್ ಬೆಂಡಾಗಿ, ಹಿಂದಿನ ನಂಬರ್ ಪ್ಲೇಟ್ ಮಿಸ್ಸಿಂಗ್ ಆಗಿದ್ದು, ಹಿಂದಿನ ಎಡಭಾಗದ ಇಂಡಿಕೇಟರ್ ಜಖಂ ಗೊಂಡಿದ್ದು, ಅವರು ಸದರಿ ವಾಹನದ ಬ್ರೇಕ್ ಸಿಸ್ಟಂನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದಾಗ ಅವು ಸರಿಯಾಗಿವೆ ಎಂದು ಕಂಡು ಬಂದ ಬಗ್ಗೆ ಅವರು ಪೊಲೀಸರಿಗೆ ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 15. ಚಾಸಾ-22/ಪ್ರಾಸಾ-11 ಡಾಃ ರಾಜಶೇಖರ್ ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 15.08.2023 ರಂದು ಮಧ್ಯಾಹ್ನ 01.15 ಗೆಂಟೆಗೆ ಹಂಚಿನಾಳ ಗ್ರಾಮದ ದೇವರಾಜ ಎಂಬ ಒಬ್ಬ ಗಾಯಾಳು ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು, ಅದೇ ದಿನ ಬೆಳಿಗ್ಗೆ 11.30 ಗಂಟೆಗೆ ಅಪಘಾತವಾಗಿರುತ್ತದೆಂದು ಅವರಿಗೆ ತಿಳಿದಿದ್ದು, ಸದರಿ ವ್ಯಕ್ತಿಯನ್ನು ಪರೀಕ್ಷಿಸಿದಾಗ ಎಡ ಮೊಣಕಾಲಿನ ಮೇಲೆ ಮಲ್ಟಿಪಲ್ ಅಬ್ರೇಷನ್ ಹಾಗೂ ಮೇಲಿನ ಮತ್ತು ಕೆಳ ತುಟಿಗೆ ಬಾವು ಆಗಿದ್ದು, ಸದರಿ ಪರೀಕ್ಷೆಯ ಆಧಾರದ ಮೇಲೆ ಸದರಿ ಗಾಯಗಳು ಸಾಧಾರಣ ಸ್ವರೂಪದ ಗಾಯಗಳು ಇದ್ದ ಬಗ್ಗೆ ಅವರು ಪೊಲೀಸರಿಗೆ ವರದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 16. ಚಾಸಾ-25/ಪ್ರಾಸಾ-12 ಶ್ರೀನಿವಾಸ ಸಿ. ಮೇಟಿ ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 16.08.2023 ರಂದು ಚಾಸಾ-24 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿ, ತನಿಖೆ ಮುಂದುವರೆಸಿ, ಅದೇ ದಿನ ಚಾಸಾ-24 ಮತ್ತು ಅವರ ಠಾಣೆಯ ಸಿಬ್ಬಂದಿಯವರಿಗೆ ಮೃತನ ಶವ ತನಿಖಾ ಪರೀಕ್ಷೆ ಜರುಗಿಸಲು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟು, ಮರುದಿನ ಚಾಸಾ-15 ರವರಿಗೆ ನೋಟೀಸ್ ಜಾರಿ ಮಾಡಿ, ಚಾಸಾ-16 ರವರ ಹೇಳಿಕೆ ಪಡೆದುಕೊಂಡು, ಅದೇ ದಿನ ಚಾಸಾ-

24 ರವರು ಶವ ತನಿಖಾ ಪಂಚನಾಮೆ ಜೊತೆಗೆ ಸಾಕ್ಷಿದಾರರ ಹೇಳಿಕೆಯನ್ನು ವಿಶೇಷ ವರದಿ ಜೊತೆಗೆ ಕೊಟ್ಟಿದ್ದನ್ನು ಅವರು ಕಡತಕ್ಕೆ ಅಳವಡಿಸಿಕೊಂಡು, ಮರುದಿನ 2 ನೇ ಆರೋಪಿಯಾದ ನೀವು ಕಾರು ಸಂಖೆ ಕೆಎ-37/ಎನ್-7789 ನೇದ್ದನ್ನು ಠಾಣೆಗೆ ಹಾಜರುಪಡಿಸಿದ ನಂತರ ಚಾಸಾ-11 ಮತ್ತು 12 ಪಂಚರನ್ನು ಠಾಣೆಗೆ ಕರೆಸಿ, ಅವರ ಸಮಕ್ಷಮ ಸದರಿ ವಾಹನದ ಜಪ್ತಿ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿದ ಕಾಲಕ್ಕೆ ಭಾವಚಿತ್ರ ತೆಗೆದ ನಂತರ 2 ನೇ ಆರೋಪಿಯಾದ ನಿಮ್ಮ ಸ್ವ-ಖುಷಿ ಹೇಳಿಕೆ ಪಡೆದುಕೊಂಡ ನಂತರ ಮಾನ್ಯ ನ್ಯಾಯಾಲಯಕ್ಕೆ ಪಿ.ಎಫ್. ಸಲ್ಲಿಸಿ. ಆರ್.ಟಿ.ಓ. ಕಛೇರಿಗೆ ವಾಹನದ ಐ.ಎಂ.ವಿ. ವರದಿ ನೀಡಲು ಮನವಿ ಮಾಡಿಕೊಂಡ ನಂತರ ಚಾಸಾ-20 ರವರಿಂದ ಐ.ಎಂ.ವಿ. ವರದಿಯನ್ನು ಪಡೆದುಕೊಂಡಿದ್ದು, ಚಾಸಾ-13 ರವರು ಘಟನಾ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದಕ್ಕೆ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೂ ಜರುಗಿಸಿದ ಸಮಯದಲ್ಲಿ ಭಾವಚಿತ್ರ ತೆಗೆಸಿ, ಕಚ್ಚಾ ನಕಾಶೆ ತಯಾರಿಸಿದ್ದು, ನಂತರ ಠಾಣೆಗೆ ಮರಳಿ ಚಾಸಾ-13 ರವರು ತೋರಿಸಿದಂತೆ ಚಾಸಾ-9 ಮತ್ತು 10 ಪಂಚರ ಸಮಕ್ಷಮ ಸಂಜೆ 5.00 ರಿಂದ 6.00 ಗಂಟೆಯವರೆಗೆ ಮೋಟಾರ್ ಸೈಕಲ್‌ನ ಜಪ್ತಿ ಪಂಚನಾಮೆ ಜರುಗಿಸಿ. ಚಾಸಾ-3, 13 ಮತ್ತು 14 ರವರ ಹೇಳಿಕೆಗಳನ್ನು ಪಡೆದುಕೊಂಡ ನಂತರ ಚಾಸಾ-15 ರವರು ಕಾರಿಗೆ ಸಂಬಂಧಪಟ್ಟ ದಾಖಲಾತಿಗಳ ಜೊತೆ ಠಾಣೆಗೆ ಹಾಜರಾಗಿ, ಅವರ ನೋಟೀಸ್‌ಗೆ ಪ್ರತ್ಯುತ್ತರ ಕೊಟ್ಟಿದ್ದು, ಚಾಸಾ-15 ರವರ ಹೇಳಿಕೆ ಹಾಗೂ ಅವರಿಂದ ಇಂಡೆಮಿನಿಟಿ ಬಾಂಡ್ ಪಡೆದು, ವಾಹನವನ್ನು ಬಿಡುಗಡೆ ಮಾಡಿದ್ದು, ಚಾಸಾ-17 ರವರು ಭಾವಚಿತ್ರಗಳನ್ನು ತೆಗೆದಿದ್ದರಿಂದ ಅವರಿಂದ ದೃಡೀಕರಣವನ್ನು ಪಡೆದು, ಚಾಸಾ-19 ರವರ ಹೇಳಿಕೆಯನ್ನು ಪಡೆದುಕೊಂಡು, ದಿನಾಂಕ 28.08.2023 ರಂದು ಮೋಟಾರ್ ಸೈಕಲ್‌ನ ಐ.ಎಂ.ವಿ. ವರದಿಯನ್ನು ಚಾಸಾ-21 ರವರಿಂದ ಹಾಗೂ ಮೃತನ ಪಿ.ಎಂ. ವರದಿಯನ್ನು ಚಾಸಾ-23 ರವರಿಂದ ಪಡೆದುಕೊಂಡಿದ್ದು, ಮರುದಿನ ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ-22 ರವರಿಂದ ಪಡೆದುಕೊಂಡಿದ್ದ ದಿನಾಂಕ 17.09.2023 ರಂದು 3 ನೇ ಆರೋಪಿಗೆ ನೋಟೀಸ್ ಜಾರಿ ಮಾಡಿದ ಮೇರೆಗೆ ದಿನಾಂಕ 02.10.2023 ರಂದು 3 ನೇ ಆರೋಪಿಯು ಠಾಣೆಗೆ ಹಾಜರಾಗಿ ಪ್ರತ್ಯುತ್ತರ ಕೊಟ್ಟು ಮೋಟಾರ್ ಸೈಕಲ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದನ್ನು ಪರಿಶೀಲಿಸಿದಾಗ ಅದನ್ನು ಚಲಾಯಿಸುತ್ತಿದ್ದ ವ್ಯಕ್ತಿಗೆ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ಸದರಿ ವಾಹನದ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದು ತಿಳಿದಿದ್ದು, ದಿನಾಂಕ 10.10.2023 ರಂದು ಚಾಸಾ-2 ರವರ ಹೇಳಿಕೆ ಪಡೆದುಕೊಂಡು, ದಿನಾಂಕ 18.08.2023 ರಂದು ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡ ನಂತರ ತನಿಖೆ ಪೂರ್ಣಗೊಂಡಿದ್ದರಿಂದ

ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆಃ 17. ನಿಮ್ಮ ಪರವಾಗಿ ಬೇರೆ ಏನಾದರೂ ಹೇಳಲು ಬಯಸುವಿರಾ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

ಪ್ರಶ್ನೆ 18. ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಏನಾದರೂ ಇದೇಯಾ?

ಉತ್ತರಃ ಆರೋಪಿ ಸಂಖ್ಯೆ 2 - ಸುಳ್ಳು

(ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಅವರಿಂದ ಬಂದ ಉತ್ತರವನ್ನು ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು, ಅವು ಸತ್ಯವನ್ನೊಳಗೊಂಡಿವೆ ಎಂದು ದೃಢೀಕರಿಸುತ್ತೇನೆ.)

ದಿಃ

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ವಿಜಯನಗರ ಜಿಲ್ಲೆ, ಹೊಸಪೇಟೆ.